**ಈ ಜಗತ್ತು ಕುರೂಪವಾಗದಿರಬೇಕಾದರೆ ನಮ್ಮ ಬದುಕು ಬೇಂದ್ರೆಯವರಂಥ ಕವಿಗಳ ಕಾವ್ಯದಿಂದ, ಕಾಣ್ಕೆಯಿಂದ ಶ್ರೀಮಂತವಾಗಬೇಕು. ನಮ್ಮ ವ್ಯಕ್ತಿತ್ವ ಸ್ಥಳೀಯ ಅಮೃತದಿಂದ ಗಟ್ಟಿಯಾಗಬೇಕು.**

ಅನ್ನಿಸುತ್ತದೆ. ಬೇಂದ್ರೆಯವರ ಸಾಧನಕೇರಿಯ ಚೆಂದ, ಅರ್ಥ ಈ ಅಂತರರಾಷ್ಟ್ರೀಯ ಮನಸ್ಕರಿಗೆ ತಿಳಿಯುವುದು ಕಷ್ಟ. ಅಂತರರಾಷ್ಟ್ರೀಯವೆಂದರೆ ಏನು? ಈ ಅಂತರರಾಷ್ಟ್ರೀಯ ಮನುಷ್ಯನಿಗೆ ಇಡೀ ಜಗತ್ತು ಒಂದು. ಇದು ಕೇವಲ ಕಲ್ಪನೆಯಲ್ಲ. ಭೂಮಿಯನ್ನು ಸೆಟಲೈಟ್‌ಗಳ ಸಹಾಯದಿಂದ ಸಂಪರ್ಕಕ್ಕೆ ಸುಲಭಗೊಳಿಸಲಾಗಿದೆ. ಒಂದು ಸ್ವಿಚ್ ಒತ್ತಿ ಆಫ್ರಿಕಾದ ಉಗಾಂಡಾದ ವ್ಯಕ್ತಿಯೊಂದಿಗೆ ಕೊಡಗಿನ ಗುಡ್ಡಗಾಡಿನ ಮನುಷ್ಯ ಮಾತಾಡಬಲ್ಲ, ಸ್ನೇಹ ಬೆಳೆಸಬಲ್ಲ. ವ್ಯಾಪಾರ ಮಾಡಬಲ್ಲ. ಜಗತ್ತು ಪುಟ್ಟ ಪಟ್ಟಣ ಅಥವಾ ಗ್ರಾಮದಂತಾಗಿದೆ. ನಮ್ಮ ಸೋದರಮಾವ ತೀರಿಕೊಂಡಾಗ ನನ್ನ ಅವ್ವ (ಅಂದರೆ ಆತನ ತಂಗಿ) ತವರುಮನೆಗೆ ಗಾಡಿಯಲ್ಲಿ ಹೋಗಿ ಅಣ್ಣನ ಮುಖ ನೋಡಲು ಒಂದು ದಿನ ಆಗುತ್ತಿತ್ತು. ಇವತ್ತು ಅಲಾಸ್ಕಾದ ಒಬ್ಬ ವ್ಯಕ್ತಿ ದಿಲ್ಲಿಗೆ ಒಂದು ದಿನದಲ್ಲಿ ಬರಬಲ್ಲ. ಇದಕ್ಕೆ ಸರಿಯಾಗಿ ಮನುಷ್ಯನ ಪ್ರಜ್ಞೆ ಕೂಡ ಬದಲಾಗಿದೆ. ಎಲ್ಲೋ ಇರುವ ಒಂದು ಅನಾಮಿಕ ಗುಂಪು ತನ್ನ ಸಂಸ್ಕೃತಿ, ನಂಬಿಕೆ, ಜೀವನಕ್ರಮ ಕಾಪಾಡಿಕೊಳ್ಳಲು ಯತ್ನಿಸುವುದು ಈ ಅಂತರರಾಷ್ಟ್ರೀಯ ಸಂಪರ್ಕ–ಸರಕನ್ನ ಮನುಷ್ಯರಿಗೆ ಸಣ್ಣತನವಾಗಿ, ಜಗತ್ತಿನ ಸಹೋದರ ಸಮುದಾಯದ ಜೊತೆಗೆ ಸೇರುವ ಬಗ್ಗೆ ಹಿಂಜರಿಕೆಯಾಗಿ ಕಾಣುತ್ತದೆ. ಆ ಸಣ್ಣ ಗುಂಪಿನ ನಂಬಿಕೆ ಮತ್ತು ಜೀವನಕ್ರಮ ಆ ಗುಂಪಿಗೆ ತಿಳಿಯುವುದಿಲ್ಲ. ಇದರಿಂದಾಗಿ ಒಂದು ಕೇಂದ್ರೀಕೃತ ವ್ಯವಸ್ಥೆಯ ಅಂತರರಾಷ್ಟ್ರೀಯ ಆಡಳಿತಗಾರರು ಈ ಸ್ಥಳೀಯ ಗುಂಪುಗಳನ್ನು ಅವರ ನಂಬಿಕೆಯಿಂದ ಬೇರ್ಪಡಿಸಲು ಯತ್ನಿಸುತ್ತಾರೆ. ಅವರ ಕಾವ್ಯ, ಚಿತ್ರ, ಶಿಲ್ಪಗಳೆಲ್ಲ ಅಮೂಲ್ಯವಾಗಿ ಕಂಡರೂ ಅವರ ಪ್ರತ್ಯೇಕತೆ ಸರ್ವಾಧಿಕಾರಿಗೆ ಸವಾಲಾಗಿ ಕಾಣುತ್ತದೆ. ಈ ದೃಷ್ಟಿಯಿಂದಲೇ ಸ್ಥಳೀಯ ಕಾವ್ಯ ನಿಷಿದ್ಧವಾಗಿ ಕಂಡರೆ ಆಶ್ಚರ್ಯವಿಲ್ಲ. ಆಧುನಿಕ ಮುನ್ನೋಟದ ಯುಗದಲ್ಲಿ ಒಂದು ಸಣ್ಣ ಗುಂಪಿನ



ಕಾವ್ಯ ಕೆಟ್ಟದಾಗಿ ಕಾಣಿಸುತ್ತದೆ. ಅಂತರರಾಷ್ಟ್ರೀಯ ಭ್ರಾತೃತ್ವದ, ಒಕ್ಕೂಟದ ನೆಮ್ಮದಿಗೆ ಸವಾಲಾಗಿ ಇದು ಕಾಣಿಸುತ್ತದೆ.

ಇದನ್ನು ನಾವು ಸ್ವಲ್ಪ ವಿವರವಾಗಿ ನೋಡಬೇಕು. ಬೇಂದ್ರೆ ಸಾಧನಕೇರಿಯನ್ನು ನೋಡುವುದು, ಧಾರವಾಡದ ಬಳಿಯ ಸ್ಮಶಾನ, ಹಾಳು ಕೆರೆ, ಮರಗಳ ತೋಪು, ಅಲ್ಲಿಯ ಗೂಗೆ ಮತ್ತು ಕೋಗಿಲೆಗಳ ಕೂಗಿಗೆ ಕಿವಿಗೊಡುವುದು, ಇವನ್ನೆಲ್ಲ ನಾವು ಅರ್ಥಮಾಡಿಕೊಳ್ಳಬೇಕಾದರೆ ಕೆಲವು ಖಚಿತ ಉದಾಹರಣೆ ಎತ್ತಿಕೊಳ್ಳಬೇಕು. ಇದಕ್ಕೆ ನನಗೆ